**ಅಸಲು ದಾವಾ ನಂಃ 110/2017**
**ಪಿ.ಡಬ್ಲ್ಯೂಃ 4,**

**<u>ದಿನಾಂಕ :04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>**
**<u>ಪಾಟಿ ಸವಾಲು :- ಶ್ರೀ. ಪಿ.ಡಿ. ಪ್ರತಿವಾದಿ ನಂ-2 ಮತ್ತು 3 ಪರ ವಕೀಲರಿಂದ :</u>**

ಪ್ರತಿವಾದಿ ಪರ ವಕೀಲರು ಪಾಟಿ ಸವಾಲು ಇಲ್ಲಾ ಎಂದು ಸಲ್ಲಿಸಿರುತ್ತಾರೆ.
**<u>ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ಪ್ರತಿವಾದಿ ನಂ-1 ಪರ ವಕೀಲರಿಂದ :</u>**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನಮ್ಮ ತಂದೆ ಸುಭಾಷಶ್ಚಚಂದ್ರ ಇವರ ಚಿಂಚೋಳಿ ಗ್ರಾಮದವರು, ಕಾಳಗಿ ಗ್ರಾಮಕ್ಕೆ ದತ್ತಕ ಹೋಗಿದ್ದಾರೆ ಎಂದರೆ ಸರಿ. ವಾದಿಯ ಗಂಡನ ಹೆಸರು ಗೊತ್ತಿಲ್ಲಾ, ವಾದಿಯ ತಾಯಿಯ ಹೆಸರು ಗುರುಬಾಯಿ, ಗುರುಬಾಯಿ ಇವರ ತಾಯಿ ಹೆಸರು ಗುಂಡಮ್ಮ. ಗುಂಡಮ್ಮ ಇವರನ್ನು ಹೊಲದಲ್ಲಿದ್ದಾಗ ನೋಡಿದ್ದೇನೆ. ಗುಂಡಮ್ಮ ಇವರು ಜಮೀನನಕ್ಕೆ ಬಂದ್ದಿದ್ದನ್ನು ಯಾವ ವರ್ಷದಿಂದ ನೋಡಿದ್ದೀರಾ ಪ್ರಶ್ನಗೆ ಸಾಕ್ಷಿ ನನಗೆ ನೆನೆಪಿಲ್ಲಾ. ದಾವಾ ಸ.ನ. 10 ಮತ್ತು 11. ಸ.ನ. 10 ಎಷ್ಟು ವಿಸ್ತೀರ್ಣ ಇದೆ ಎಂದ ಗೊತ್ತಿಲ್ಲಾ. ಅದೇ ರೀತಿ ಸ.ನ. 11 ರ ವಿಸ್ತೀರ್ಣ ಕೂಡಾ ಗೊತ್ತಿರುವುದಿಲ್ಲಾ. ಸ.ನ. 10ರ ಪೂರ್ವಕ್ಕೆ : ಸರಕಾರಿ ಆಸ್ಪತ್ರೆ, ಪಶ್ಚಿಮಕ್ಕೆ : ಸ.ನ. 12 ಜಮಿನು ಇರುತ್ತದೆ. ಉತ್ತರಕ್ಕೆ: ಶಿವಶರಣಪ್ಪ ಡಿಗ್ರಿ ಕಾಲೇಜ ರೋಡ ಇದೆ, ದಕ್ಷಿಣಕ್ಕೆ : ರಸ್ತೆ ಇದೆ. ಅದೇ ರೀತಿ ಸ.ನ. 11 ರ ಚೆಕ್ ಬಂದಿ ಗೊತ್ತಿಲ್ಲಾ. ವಾದಿಗೆ ಇಬ್ಬರು ಅಣ್ಣ ತಮ್ಮಂದಿರು ಅವರು ಅಪ್ಪರಾಯ ಮತ್ತು ಜಗದೀಶ . ದಾವಾ ಆಸ್ತಿಯ ಅಕ್ಕ ಪಕ್ಕ ನನ್ನ ಹೊಲ ಇಲ್ಲಾ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗುಂಡಮ್ಮ ಜೀವಂತ ಇರುವ ತನಕ ಅವರೇ ಸಾಗುವಳಿ ಮಾಡುತ್ತಿದ್ದರು. ದಾವಾ ಆಸ್ತಿಯ ಪಹಣಿಯನ್ನು ನೋಡಿಲ್ಲಾ. ಗುಂಡಮ್ಮ ಮತ್ತು ಗಂಡ ಅಪ್ಪಾಸಾಬ ಇವರು ತೀರಿ ಹೋದ ನಂತರ 1ನೇ ಪ್ರತಿವಾದಿಯೇ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ವಾದಿ ದಾವಾ ಜಮೀನುಗಳಿಗೆ ಸಾಗುವಳಿ ಮಾಡುತ್ತಿದ್ದಾರೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ವಾದಿಯ ಗಂಡನ ಊರು ಘರತಾಬಾದ. ವಾದಿಯನ್ನು ನೋಡಿದ್ದೇನೆ, ಅವರ ತವರು ಮನೆ ಕಾಳಗಿ ಎಂದರೆ ಸರಿ. ಶಿವಲೀಲಾ ಇವರ ತವರು ಮನೆ ಕಾಳಗಿ. ಅಪ್ಪಾಸಾಬ ಕಾಳಗಿಯನ್ನು ತೀರಿಹೋಗಿದ್ದಾರೆ ಎಂದರೆ ಸರಿ. ವಾದಿಯು ನನ್ನನ್ನು ಕರೆದುಕೊಂಡು ಬಂದು ಅವರೇ ದಾವಾ ಆಸ್ತಿಯಲ್ಲಿ ಕಬ್ಜೆ ಇದ್ದಾರೆಂದು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**